ಈ) ಇಲ್ಲ.
ಉ) ಉದ್ಭವಿಸುವುದಿಲ್ಲ.
ಊ) ಉದ್ಭವಿಸುವುದಿಲ್ಲ.

ಬ್ಯಾಕ್‌ಲಾಗ್ ಹುದ್ದೆಗಳ ನೇಮಕಾತಿ

533 (988) ಶ್ರೀ ನೆ.ಲ. ನರೇಂದ್ರಬಾಬು (ಮಹಾಲಕ್ಷ್ಮಿ ಲೇಔಟ್) : ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಲೋಕೋಪಯೋಗಿ ಇಲಾಖೆಯ ಇಂಜಿನಿಯರ್‌ಗಳ ಬ್ಯಾಕ್‌ಲಾಗ್ ಹುದ್ದೆಗಳ ನೇಮಕಾತಿಗೆ ಕೆ.ಎ.ಟಿ. ಮತ್ತು ಮಾನ್ಯ ಉಚ್ಚ ನ್ಯಾಯಾಲಯದಿಂದ ನಿರ್ದೇಶನಗಳಿದ್ದರೂ ಸಹ ಸರ್ಕಾರ ಇಂಜಿನಿಯರ್‌ಗಳ ಬ್ಯಾಕ್‌ಲಾಗ್ ಹುದ್ದೆಗಳಿಗೆ ಗುತ್ತಿಗೆ ನೌಕರರನ್ನೇ ಖಾಯಂ ಮಾಡಲು ರಚಿಸಲಾದ 2005ರ ವಿಶೇಷ ನಿಯಮಾವಳಿಯನ್ನು ಅನುಷ್ಠಾನಗೊಳಿಸುವ ಮೊದಲು ನ್ಯಾಯಾಲಯಗಳ ಅನುಮತಿ ಪಡೆಯಲಾಗದೆ ಇರುವುದಕ್ಕೆ ಕಾರಣವೇನು;

ಆ) ದಿನಾಂಕ: 7–4–2005ರ ಸಚಿವ ಸಂಪುಟದ ನಿರ್ಣಯದಲ್ಲೂ ಸಹ ಕೆಎಟಿಯ ಅನುಮತಿ ಪಡೆಯುವಂತೆ ಸೂಚಿಸಿದ್ದರೂ ಅನುಮತಿ ಪಡೆಯದೆ 2005ರ ವಿಶೇಷ ನಿಯಮಾವಳಿಗಳನ್ನು ಅನುಷ್ಠಾನಗೊಳಿಸಿರುವ ಹಿನ್ನೆಲೆಯಲ್ಲಿ ಕಾರ್ಯಾಂಗದಿಂದ ಸಚಿವ ಸಂಪುಟದ ನಿರ್ಣಯವನ್ನು ಉಲ್ಲಂಘಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಇ) ಮೇಲ್ಕಂಡ ವಿಷಯಗಳ ಹಿನ್ನೆಲೆಯಲ್ಲಿ ದಿನಾಂಕ: 25–5–2009 ರಂದು ಕೆಎಟಿಯು 2005ರ ವಿಶೇಷ ನಿಯಮಾವಳಿಯನ್ನು ರದ್ದುಪಡಿಸಿರುವು ದರಿಂದ 1278, ಎಸ್‌ಸಿ/ಎಸ್‌ಟಿ ಇಂಜಿನಿಯರ್‌ಗಳ ಉದ್ಯೋಗ ಭದ್ರತೆಗೆ ಸರ್ಕಾರದ ಮುಂದಿನ ಕ್ರಮ ಏನು;

ಈ) ಹೆಚ್ಚು ಅಂಕಗಳು ಹಾಗೂ ಅರ್ಹತೆ ಇದ್ದು, ನ್ಯಾಯಾಲಯ ದಿಂದಲೂ ಸಹ ತೀರ್ಪು ಪಡೆದಿರುವಂತಹ, ವಯೋಮಿತಿ ಮೀರುತ್ತಿರುವ ಅರ್ಹ ಎಸ್‌ಸಿ/ಎಸ್‌ಟಿ ನಿರುದ್ಯೋಗಿ ಇಂಜಿನಿಯರ್‌ಗಳ ಭವಿಷ್ಯದ ಕುರಿತಾಗಿ ಸರ್ಕಾರ ತೆಗೆದುಕೊಂಡ ಕ್ರಮ ಏನು;

ಊ) ಸರ್ಕಾರ, ಕೇವಲ ಉಚ್ಚ ನ್ಯಾಯಾಲಯದ ಅಂತಿಮ ತೀರ್ಪನ್ನು ನಿರೀಕ್ಷಿಸುವುದರ ಜೊತೆಗೆ, ನ್ಯಾಯಾಲಯದ ಅನುಮತಿಯನ್ನು ಪಡೆಯುವುದರೊಂದಿಗೆ ಈ ಬ್ಯಾಕ್‌ಲಾಗ್ ಇಂಜಿನಿಯರ್ ನೇಮಕಾತಿಯ ಜ್ವಲಂತ ಸಮಸ್ಯೆಯನ್ನು ಶಾಶ್ವತವಾಗಿ ಬಗೆ ಹರಿಸಲು ಯಾವುದಾದರೂ ಕ್ರಮಗಳು ಮಾರ್ಗೋಪಾಯಗಳು, ಪ್ರಸ್ತಾವನೆಗಳು ಸರ್ಕಾರದ ಮುಂದೆ ಇದೆಯೇ, ಇದ್ದಲ್ಲಿ ಯಾವಾಗ ಕ್ರಮ ಕೈಗೊಳ್ಳಲಾಗುವುದು;

ಶ್ರೀ ಸಿ.ಎಂ.ಉದಾಸಿ (ಲೋಕೋಪಯೋಗಿ ಸಚಿವರು) :

ಅ) ಲೋಕೋಪಯೋಗಿ, ಜಲ ಸಂಪನ್ಮೂಲ ಮತ್ತು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಇಂಜಿನಿಯರಿಂಗ್ ಇಲಾಖೆಗಳಲ್ಲಿ ಸಹಾಯಕ ಇಂಜಿನಿಯರ್ ಮತ್ತು ಕಿರಿಯ ಇಂಜಿನಿಯರ್ ವೃಂದದ ಬ್ಯಾಕ್‌ಲಾಗ್ ಹುದ್ದೆಗಳಲ್ಲಿ ಗುತ್ತಿಗೆ ಆಧಾರದ ಮೇಲೆ ಕಾರ್ಯನಿರ್ವಹಿಸುತ್ತಿದ್ದ ಇಂಜಿನಿಯರ್‌ಗಳನ್ನು ವಿಲೀನಗೊಳಿಸಲು ಉದ್ದೇಶಿಸಿ "The Karnataka Civl Services (Absorption of persons appointed on contract basis against backing vacancies in the category of Assistant Engineers and Junior Engineers in the Departments of Public Works Engineering and Water Resources and Rural Development and Panchayat Raj) (Special) Rules 2005" ರ ಕರಡು ನಿಯಮಾವಳಿಯನ್ನು ಕರ್ನಾಟಕ ಆಡಳಿತ ನ್ಯಾಯಮಂಡಳಿಯ ಅನುಮೋದನೆ ಪಡೆಯುವ ಷರತ್ತಿಗೊಳಪಟ್ಟು ಸಚಿವ ಸಂಪುಟವು ದಿನಾಂಕ: 7–4–2005 ರಂದು ನಡೆದ ಸಭೆಯಲ್ಲಿ ಅನುಮೋದಿಸಿತು. ಸಚಿವ ಸಂಪುಟದ ಆದೇಶದಂತೆ ಸದರಿ 2005ರ ವಿಶೇಷ ಕರಡು ನಿಯಮಾವಳಿಯಿಂದ ಬಾಧಿತರಾದವರಿಂದ ಆಕ್ಷೇಪಣೆ/ಅಹವಾಲುಗಳನ್ನು ಸಲ್ಲಿಸಲು 15 ದಿವಸಗಳ ಕಾಲಾವಕಾಶವನ್ನು ಕಲ್ಪಿಸಿ ಸಂಖ್ಯೆ ಲೋಇ:420:ಸೇಸಕಿ:03 ದಿನಾಂಕ: 12–4–2005ರ ಅಧಿಸೂಚನೆಯಲ್ಲಿ ಪ್ರಕಟಿಸಿ ಕರ್ನಾಟಕ ಆಡಳಿತ ನ್ಯಾಯಮಂಡಳಿಯ ಅನುಮೋದನೆ ಪಡೆಯುವಂತೆ ಸೂಚಿಸಿ ರಾಜ್ಯ ಉಚ್ಚ ನ್ಯಾಯಾಲಯದ ಅಡ್ವೋಕೇಟ್ ಜನರಲ್‌ರವರಿಗೆ ಸಂಖ್ಯೆ ಲೋಇ:420: ಸೇಸಕಿ:03 ದಿನಾಂಕ: 13–4–2005 ರಲ್ಲಿ ಸರ್ಕಾರದ ಪತ್ರ ಬರೆಯಲಾಯಿತು.

ಆ) ಮೇಲೆ '(ಅ)' ದಲ್ಲಿನ ಉತ್ತರದಂತೆ ಕ್ರಮ ವಹಿಸಿರುವುದರಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಇ) ಬ್ಯಾಕ್‌ಲಾಗ್ ಇಂಜಿನಿಯರ್‌ಗಳ ಪ್ರಕರಣಕ್ಕೆ ಸಂಬಂಧಿಸಿದಂತೆ ಕರ್ನಾಟಕ ಆಡಳಿತ ನ್ಯಾಯ ಮಂಡಳಿಯಲ್ಲಿ ಸಲ್ಲಿಸಲಾಗಿದ್ದ ಅರ್ಜಿ ಸಂಖ್ಯೆ 6258/2003 ಮತ್ತು ಇತರೆ ಪ್ರಕರಣಗಳಲ್ಲಿ ಸರ್ಕಾರವು ಹೊರಡಿಸಿದ್ದ 2005ರ ವಿಶೇಷ ನಿಯಮಾವಳಿಯನ್ನು ಮಾನ್ಯ ನ್ಯಾಯಮಂಡಳಿಯು ದಿನಾಂಕ: 25-5-2009ರಂದು ಅಸಿಂಧುಗೊಳಿಸಿರುತ್ತದೆ. ಅದರಂತೆ ನ್ಯಾಯ ಮಂಡಳಿಯ ದಿನಾಂಕ: 25-5-2009ರ ತೀರ್ಪಿನಿಂದ ಬಾಧಿತರಾದ ಬ್ಯಾಕ್‌ಲಾಗ್ ಇಂಜಿನಿಯರ್‌ಗಳು ಈಗಾಗಲೇ ಉಚ್ಚ ನ್ಯಾಯಾಲಯದಲ್ಲಿ ಸಂಖ್ಯೆ 15314/09 ರಲ್ಲಿ ರಿಟ್ ಅರ್ಜಿ ಸಲ್ಲಿಸಿದ್ದು, ನ್ಯಾಯ ಮಂಡಳಿಯ ತೀರ್ಪಿಗೆ ಮಾನ್ಯ ಉಚ್ಚ ನ್ಯಾಯಾಲಯವು ದಿನಾಂಕ: 12-6-2009ರಂದು ತಡೆಯಾಜ್ಞೆ ನೀಡಿರುತ್ತದೆ. ಹಾಗೂ ಈ ಕುರಿತು ರಾಜ್ಯ ಸರ್ಕಾರವು ಸಲ್ಲಿಸಿರುವ ರಿಟ್ ಅರ್ಜಿ ಸಂಖ್ಯೆ 23707/09ರ ಪ್ರಕರಣವನ್ನು ಮೇಲೆ ತಿಳಿಸಿದ ರಿಟ್ ಅರ್ಜಿಯೊಂದಿಗೆ ಒಂದುಗೂಡಿಸಿ ನ್ಯಾಯಾಲಯದ ಮುಂದೆ ತೀರ್ಮಾನಕ್ಕೆ ಬಾಕಿ ಇರುತ್ತದೆ.

ಈ) ಮೇಲಿನ (ಇ)ದಲ್ಲಿನ ಉತ್ತರದಂತೆ ಬ್ಯಾಕ್‌ಲಾಗ್ ಇಂಜಿನಿಯರ್‌ಗಳ ಪ್ರಕರಣವು ಮಾನ್ಯ ಉಚ್ಚ ನ್ಯಾಯಾಲಯದ ಮುಂದೆ ವಿಚಾರಣೆಗೆ ಬಾಕಿ ಇದ್ದು, ಸಬ್ ಜ್ಯೂಡಿಸ್ (Sub-Judice) ಆಗಿರುವುದರಿಂದ ಉಚ್ಚ ನ್ಯಾಯಾಲಯದಿಂದ ಈ ಪ್ರಕರಣವು ಇತ್ಯರ್ಥವಾಗುವವರೆಗೂ ಈ ಕುರಿತು ಮುಂದಿನ ಯಾವುದೇ ಕ್ರಮ ವಹಿಸಲು ಸಾಧ್ಯವಾಗುವುದಿಲ್ಲ, ಆದ್ದರಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಉ) ಮೇಲೆ (ಈ) ದಲ್ಲಿ ನೀಡಿರುವ ಉತ್ತರದಂತೆ ಪ್ರಶ್ನೆ ಉದ್ಭವಿಸುವುದಿಲ್ಲ.

ಪಾದಚಾರಿ ರಸ್ತೆ

534 (989) ಶ್ರೀ ನರೇಂದ್ರಬಾಬು ನೆ.ಲ. (ಮಹಾಲಕ್ಷ್ಮೀ ಲೇಔಟ್) : ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯ ಹೆದ್ದಾರಿಗಳನ್ನು ನಿರ್ಮಿಸುವಾಗ ಪಾದಚಾರಿಗಳು ಸಂಚರಿಸಲು ಯಾವ್ಯಾವ ಜಾಗರೂಕತೆಯನ್ನು ಸರ್ಕಾರ ತೆಗೆದುಕೊಂಡಿದೆ;